ದಿನಾಂಕಃ 13.03.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎಸ್.ಎ. ವಕೀಲರಿಂದಃ**

ಮೂಡಿಗೆರೆ ಪ್ರಧಾನ ಸಿವಿಲ್ ನ್ಯಾಯಾಲಯದ ಅ.ದಾ.ಸಂ.119/2020 ರಲ್ಲಿ ನಾನು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆ ಸದರಿ ಪ್ರಕರಣದಲ್ಲಿನ ನನ್ನ ಸಾಕ್ಷ್ಯ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಸದರಿ ದಾವೆಯನ್ನು ನನ್ನ ತಾಯಿ ನೊನಮ್ಮ ರವರು ಈ ದಾವೆಯ ವಾದಿಯ ವಿರುದ್ದ ಸಲ್ಲಿಸಿದ್ದಾರೆ ಎಂದರೆ ಸರಿ. ಆ ದಾವೆಯಲ್ಲಿಯೂ ಸಹಾ ನನ್ನ ತಂದೆಗೆ ಕುಂದೂರು ಗ್ರಾಮದ ಸ.ನಂ.79 ರಲ್ಲಿ 3 ಎಕರೆ 20 ಗುಂಟೆ ಜಮೀನು ಮಂಜೂರಾಗಿದ್ದು ಅದರಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ ಎಂದು ಪ್ರತಿಪಾದಿಸಿದ್ದೇವೆ ಎಂದರೆ ಸರಿ. ಆ ದಾವೆಯಲ್ಲಿ ವಾದಿ ಅಶೋಕ್‌ಗೌಡರವರು ತನಗೂ ಸಹಾ ಸ.ನಂ.79 ರಲ್ಲಿ 4 ಎಕರೆ 4 ಗುಂಟೆ ಜಮೀನು ಮಂಜೂರಾಗಿದ್ದು ಆ ಜಮೀನಿನಲ್ಲಿ ತಾವೇ ಸ್ವಾಧೀನದಲ್ಲಿ ಇರುವುದಾಗಿ ಹೇಳಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಅ.ದಾ.ಸಂ.119/2020 ರಲ್ಲಿ ಅಶೋಕ್ ಗೌಡರವರು ಈ ದಾವೆಯಲ್ಲಿ ತೋರಿಸಿರುವ ಚೆಕ್ಕುಬಂದಿಯಲ್ಲಿನ ಜಮೀನನ್ನೇ ಆ ದಾವೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸಲ್ಲಿಸಲಾಗಿರುವ ದಾಖಲಾತಿಗಳನ್ನೇ ವಾದಿಯು ಅ.ದಾ.ಸಂ.119/2020 ರಲ್ಲಿ ಸಲ್ಲಿಸಿದ್ದಾರೆ ಎಂದರೆ ಸರಿ. ಅ.ದಾ.ಸಂ.119/2020 ವಜಾ ಆಗಿದೆ ಎಂದರೆ ಸರಿ. ಅ.ದಾ.ಸಂ.119/2020 ರಲ್ಲಿ ತಾತ್ಕಾಲಿಕ ನಿರ್ಭಂದಕಾಜ್ಞೆ ಪಡೆದು ದಿ.21.09.2020 ರಂದು ವಾದಿಗೆ ಸೇರಿದ ದಾವಾ ಜಮೀನಿಗೆ ಅತೀಕ್ರಮ ಪ್ರವೇಶ ಮಾಡಿ, ಗಿಡಗಳನ್ನು ಕತ್ತರಿಸಿ ಒತ್ತುವರಿ ಮಾಡಲು ಪ್ರಯತ್ನಿಸಿದ್ದೆವು ಎಂದರೆ ಸರಿಯಲ್ಲ. ಪುನಃ ದಿ.23.09.2020 ರಂದು ದಾವಾ ಜಮೀನಿನಲ್ಲಿ ಗುಡಿಸಲು ನಿರ್ಮಾಣ ಮಾಡಲು ಪ್ರಯತ್ನಿಸಿದೆವು ಎಂದರೆ ಸರಿಯಲ್ಲ.

ವಾದಿಗೆ ಸೇರಿದ ದಾವ ಸ್ವತ್ತನ್ನೆ ತಮಗೆ ಸೇರಿದ್ದು ಎಂದು ಪ್ರತಿಪಾದಿಸುತ್ತಿದ್ದೀರ ಎಂದರೆ ಸಾಕ್ಷಿಯು ವಾದಿಯ ಜಮೀನು ಬೇರೆ ಕಡೆ ಇದೆ ಎಂದು ನುಡಿಯುತ್ತಾರೆ. ದಾವಾ ಜಮೀನು ನಮಗೆ ಸೇರಿದ್ದು ಎಂದು ವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಮೇಲೆ ತಮಗೆ ಏನಾದರು ಹಕ್ಕು ಇದೆಯಾ ಎಂದರೆ ಸಾಕ್ಷಿಯು ದಾವ ಸ್ವತ್ತು ತಮ್ಮದೇ ಎಂದು ನುಡಿಯುತ್ತಾರೆ. ದಾವ ಸ್ವತ್ತು ನಮ್ಮದು ಎಂದು ಸುಳ್ಳು ಪ್ರತಿಪಾಧನೆ ಮಾಡುತ್ತಿದ್ದೇನೆ ಎಂದರೆ

ಸರಿಯಲ್ಲ. ಕುಂದೂರು ಗ್ರಾಮದಲ್ಲಿನ ನನ್ನ ಮನೆಯ ದಕ್ಷಿಣಕ್ಕೆ ಕುಂದೂರು-ಬಣಕಲ್ ರಸ್ತೆ ಇದೆ. ನನ್ನ ಮನೆಯಿಂದ 300 ಅಡಿ ದೂರದಲ್ಲಿ ಆಗ್ನೇಯ ದಿಕ್ಕಿನಲ್ಲಿ ಮಂಜುನಾಥ್ ರವರ ಮನೆ ಇದೆ. ಅಂತು ರವರ ಮನೆ ನಮ್ಮ ಜಮೀನಿನ ಪಕ್ಕದಲ್ಲಿ ಆಗ್ನೇಯ ದಿಕ್ಕಿನಲ್ಲಿ ಇದೆ. ನನ್ನ ಮನೆಯ ಪೂರ್ವಕ್ಕೆ ವಾದಿಯ ಮನೆ ಹಾಗೂ ನೈರುತ್ಯದ ಕಡೆಗೆ ಕಮಲರವರ ಮನೆ ಇದೆ. ಮೇಲೆ ಹೇಳಿದವರ ಪೈಕಿ ಕಮಲರವರ ಮನೆಯ ಮುಂದೆ ರಸ್ತೆ ಇದೆ ಆದರೆ ಬೇರೆಯವರ ಮನೆಯ ಮುಂದೆ ಇಲ್ಲ. ಮಂಜುನಾಥ್ ರವರ ಮನೆಯ ಮುಂದೆ ವಾದಿಯ ಮನೆಗೆ ಹೋಗುವ ರಸ್ತೆ ಇದೆ.

ಮಂಜುನಾಥ್, ಅಂತು ಮತ್ತು ಕಮಲಮ್ಮ ರವರಿಗೆ ಮನೆ ಮತ್ತು ಮನೆಯ ಪಕ್ಕದ ಜಾಗ ಇದೆ. ಸದರಿರವರ ಮನೆ ಮತ್ತು ಜಾಗದ ನಂತರ ಹಳ್ಳ ಇದೆ ಎಂದರೆ ಸರಿ. ನಮಗೆ ಮಂಜೂರಾಗಿದೆ ಎಂದು ಹೇಳಲಾದ ಜಮೀನಿಗೆ ಚೆಕ್ಕುಬಂದಿ ನೀಡುವಾಗ ಮಂಜುನಾಥ್, ಅಂತು ಮತ್ತು ಕಮಲಮ್ಮರವರ ಮನೆ ಮತ್ತು ಜಾಗವನ್ನು ನಮೂದಿಸಿಲ್ಲ ಎಂದರೆ ಸರಿ. ನಿಡಿ-3 ರ ಪ್ರಕಾರ ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಚೌಡಯ್ಯ ರವರ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಸುಬ್ಬಯ್ಯ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ನಿಡಿ-3 ರ ಪ್ರಕಾರ ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಸುಬ್ಬಯ್ಯರವರ ಜಮೀನು ಇದೆ ಎಂದರೆ ಸರಿಯಲ್ಲ. ನಿಡಿ-12 ಮತ್ತು 13 ರಲ್ಲಿ ರೋನಾಲ್ಡ್ ರವರ ಜಾಗ ಗುರುತಾಗಿಲ್ಲ ಎಂದರೆ ಸರಿ. ನಿಡಿ-6 ರ ಪ್ರಕಾರ ನಮಗೆ ಮಂಜೂರಾಗಿದೆ ಎಂದು ಹೇಳಲಾದ ಜಮೀನಿನ ಪಶ್ಚಿಮ ದಿಕ್ಕಿಗೆ ಗೋವಿಂದಪ್ಪ, ಉತ್ತರ ದಿಕ್ಕಿಗೆ ಚೌಡಯ್ಯ ಮತ್ತು ಪಶ್ಚಿಮ ದಿಕ್ಕಿಗೆ ಸುಬ್ಬಯ್ಯ ರವರ ಜಮೀನು ಇದೆ ಎಂದರೆ ಸರಿಯಲ್ಲ.

ದುರುದ್ದೇಶದಿಂದ ಮಂಜೂರಾತಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸುಳ್ಳು ಚೆಕ್ಕುಬಂದಿಯನ್ನು ನೀಡಿ ವಾದಿಯ ಜಮೀನಿನ್ನು ಕಬಳಿಸಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತನಗೆ ಮಂಜೂರಾದ ಜಮೀನಿನ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನುಡಿಯುತ್ತಾರೆ. ಸುಳ್ಳು ದಾಖಲೆ ಎಂದು ಹೇಳಿರುವ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿಯು ವಾದಿಯ ಜಮೀನು ಬೇರೆ ಕಡೆ ಇದೆ ಎಂದು ನುಡಿಯುತ್ತಾರೆ. ನಮಗೆ ಮಂಜುರಾಗಿದೆ ಎಂದು ಹೇಳಲಾದ ಜಮೀನಿನ ಮಂಜೂರಾತಿ ನಕ್ಷೆ ನಮ್ಮ ಬಳಿ ಇದ್ದರೂ ಸಹಾ ಅದನ್ನು ಹಾಜರುಪಡಿಸದೇ ಪೋಡಿ ನಕ್ಷೆ ಹಾಜರುಪಡಿಸಿರುತ್ತೀರ ಎಂದರೆ ಸಾಕ್ಷಿಯು ಎರಡು ನಕ್ಷೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಎರಡು ನಕ್ಷೆಗಳಿಗೂ ತಾಳೇ ಇಲ್ಲದ ಕಾರಣ

ಕೇವಲ ಒಂದು ನಕ್ಷೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಉಪಯೋಗವಾಗುವಂತೆ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲದಿದ್ದರೂ ವಿನಾಃ ಕಾರಣ ವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.